ಶ್ರೀ ಸಿ.ಎಂ.ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು Malpractice ಆಗಿರುವ ಬಗ್ಗೆ, ಅವ್ಯವಹಾರ ಆಗಿರುವ ಬಗ್ಗೆ 164/– ರೂ. ಗಳಿಗೆ ಖದೀರಿ ಮಾಡಿರುವ ಬಗ್ಗೆ, ಬೇರೆ ಎರಡು ಇಲಾಖೆಗಳಲ್ಲಿ, ಒಂದು ಇಲಾಖೆಯಲ್ಲಿ 164/–ರೂ.ಗಳಿಗೆ ಮತ್ತೊಂದು ಅದೇ ಆರೋಗ್ಯ ಇಲಾಖೆಯಲ್ಲಿ 56/–ರೂ.ಗಳಿಗೆ ಖರೀದಿ ಮಾಡಿರುತ್ತಾರೆಂದು ಹೀಗೆ ಬೇರೆ ಬೇರೆ ವಿವರಗಳನ್ನು ಕೊಟ್ಟಿದ್ದಾರೆ. ಆ ವಿವರಗಳನ್ನು ಲಿಖಿತವಾಗಿ ಕೊಟ್ಟರೆ, ಅವುಗಳನ್ನು ತೆಗೆದುಕೊಂಡು ಮತ್ತು ದಾಖಲೆ ಇರುವ ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದು ವಿಚಾರಣೆ ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

9. ನಿಯಮ 69ರ ಮೇಲಿನ ಚರ್ಚೆ :

ವಿಷಯ : ಟೋಕರೆಕೋಳಿ, ಕೋಳಿಡೋರಾ ಮತ್ತು ಕೋಯಾ ಎಂಬ ಜನಾಂಗದವರಿಗೆ ಪರಿಶಿಷ್ಟ ವರ್ಗದ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಕೆಳಗೆ ಒಂದು ಪ್ರಸ್ತಾವನೆಯನ್ನು ತಂದಿದ್ದೇನೆ. ಬಿಜಾಪುರ ಜಿಲ್ಲೆಯ ನನ್ನ ಮತಕ್ಷೇತ್ರದಲ್ಲಿ ಟೋಕರೆಕೋಳಿ, ಕೋಳಿಡೋರಾ, ಕೋಯಾ ಎಂಬ ಜನಾಂಗದವರಿದ್ದಾರೆ. ಅದರ ಟೋಕರೆಕೋಳಿ ಎಂಬ ಜನಾಂಗವೇ ಬಿಜಾಪುರ ಜಿಲ್ಲೆಯಲ್ಲಿ ಇಲ್ಲ ಎಂಬ ನೆಪವನ್ನು ಮುಂದು ಮಾಡಿ ಬಿಜಾಪುರ ಜಿಲ್ಲಾಧಿಕಾರಿಗಳು ಪರಿಶಿಷ್ಟ ವರ್ಗದ ಪ್ರಮಾಣ ಪತ್ರವನ್ನು ನೀಡುತ್ತಿಲ್ಲ. ಆದರೆ 1994ರಲ್ಲಿ ನಮ್ಮದೇ ಕರ್ನಾಟಕ ಸರ್ಕಾರ ಒಂದು ಆದೇಶವನ್ನು ಹೊರಡಿಸಿ ಯಾರ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್‌ನಲ್ಲಿ ಟೋಕರೆಕೋಳಿ ಎಂದು ಇದೆಯೋ, ಅಂತಹವರಿಗೆ ಪರಿಶಿಷ್ಟ ಜನಾಂಗದವರ ಸರ್ಟಿಫಿಕೇಟ್ ಕೊಡಬೇಕೆಂಬ ಆದೇಶವನ್ನು ಹೊರಡಿಸಿದೆ. ಆದರೆ ಇಂತಹ ಆದೇಶ ಜಾರಿಯಲ್ಲಿದ್ದರೂ ಸಹ ಈ ಅಧಿಕಾರಿಗಳು ಆದೇಶವನ್ನು ಕತ್ತಲೆಯಲ್ಲಿಟ್ಟು ಜನರಿಗೆ ಸರ್ಟಿಫಿಕೇಟ್ ನೀಡದೆ ತೊಂದರೆಯನ್ನುಂಟು ಮಾಡುತ್ತಿದ್ದಾರೆ. ಈ

ಬಗ್ಗೆ ಎಷ್ಟೋ ಬಾರು, 1994 ರಿಂದ ಈ ಜನಾಂಗ ಹೋರಾಟ ಮಾಡುತ್ತಿದೆ. ಇವತ್ತು ಟೋಕರೆಕೋಳಿ ಜನಾಂಗದವರಿಗೆ ಪರಿಶಿಷ್ಟ ಜನಾಂಗದವರ ಸರ್ಟಿಫಿಕೇಟ್ ಪಡೆಯುವುದು ಅವರ ಸಂವಿಧಾನ ಬದ್ಧವಾದ ಹಕ್ಕು. ಆದರೆ ಇವತ್ತಿನ ಅಧಿಕಾರಿಗಳು ಈ ಜನರಿಗೆ ಸಂವಿಧಾನ ಬದ್ಧವಾಗಿ ಸಿಗಬೇಕಾದಂತಹ ಒಂದು ಸೌಲಭ್ಯವನ್ನು ಕೊಡದೆ ತೊಂದರೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ನಾನು ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ, ಯಾರ್ಯಾರ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್‌ನಲ್ಲಿ ಟೋಕರೆಕೋಳಿ ಎಂದು ಇದೆಯೋ, ಅಂತಹವರಿಗೆ ಪರಿಶಿಷ್ಟ ಜಾತಿಯ ಸರ್ಟಿಫಿಕೇಟ್ ನೀಡುವಂತೆ ಸರ್ಕಾರ ಆದೇಶ ಮಾಡಬೇಕೆಂದು ವಿನಂತಿಸುತ್ತೇನೆ. ಇನ್ನೊಂದು ವಿಷಯವೇನೆಂದರೆ, ಈ ಜನಾಂಗದ ಬಗ್ಗೆ 2004ರಲ್ಲಿ ಕೇಂದ್ರ ಸರ್ಕಾರ ಈ ಜಾತಿಯ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರ ಕರ್ನಾಟಕ ಸರ್ಕಾರಕ್ಕೆ ಆದೇಶ ನೀಡಿತ್ತು. ಆದರೆ ಇಷ್ಟು ವರ್ಷಗಳಾದರೂ ನಮ್ಮ ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ಜರುಗಿಸದೆ ಕೇಂದ್ರ ಸರ್ಕಾರಕ್ಕೆ ವರದಿಯನ್ನು ನೀಡಿಲ್ಲ. ಈಗಾಗಲೇ ಕುಲ ಶಾಸ್ತ್ರೀಯ ವರದಿಯ ಬಗ್ಗೆ ಹಂಪಿ ವಿಶ್ವವಿದ್ಯಾನಿಲಯದಲ್ಲಿ ಈ ಬಗ್ಗೆ ವಿಚಾರ ನಡೆದು, ವರದಿ ತಯಾರು ಮಾಡಿದ್ದರೂ ಸಹ ಸರ್ಕಾರ ಯಾವುದೇ ಒಂದು ಆಸ್ಥೆಯನ್ನು ವಹಿಸದೆ ಕುಲ ಶಾಸ್ತ್ರೀಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸದೆ ಈ ಜನಾಂಗದವರಿಗೆ ಅನ್ಯಾಯ ಮಾಡುತ್ತಿರುವ ಹಿನ್ನೆಲೆಯಲ್ಲಿ ನಾನು ಸರ್ಕಾರಕ್ಕೆ ಈ ಮೂಲಕ ವಿನಂತಿಸುವುದೇನೆಂದರೆ, ಹಂಪಿ ವಿಶ್ವವಿದ್ಯಾಲಯದವರು ತಯಾರಿಸಿದಂತಹ ಕುಲಶಾಸ್ತ್ರೀಯ ವರದಿಯನ್ನು ಆದಷ್ಟು ಬೇಗನೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಈ ಸಮಾಜಕ್ಕೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಪರಿಶಿಷ್ಟ ಜಾತಿಯ ಟೋಕರೆಕೋಳಿ ಜನಾಂಗ ಇವೆಲ್ಲಾ ಸಮಾನ ಅರ್ಥದ ಪದಗಳೆಂದು ಈ ಬಗ್ಗೆ ಕ್ರಮ ಜರುಗಿಸಲು ನಮ್ಮ ಜೆ.ಹೆಚ್.ಪಟೇಲ್ ರವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾಗ ಒಂದು cabinet decision ತೆಗೆದು ಕೊಂಡಿದ್ದರೂ ಸಹ ಈ ನಿರ್ಣಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸದೆ ನಮ್ಮ

ರಾಜ್ಯ ಸರ್ಕಾರವು ಟೋಕರೆಕೋಳಿ, ಕೋಳಿಡೋರಾ, ಕೋಯಾ ಜನಾಂಗಕ್ಕೆ ಅನ್ಯಾಯ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ದಯಮಾಡಿ ಇನ್ನೊಮ್ಮೆ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಈ cabinet decision ಮತ್ತು ಕುಲ ಶಾಸ್ತ್ರೀಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿ ಯಾರ್ಯಾರ ಸರ್ಟಿಫಿಕೇಟ್‌ನಲ್ಲಿ ಟೋಕರೆಕೋಳಿ ಎಂದು ಇದೆಯೋ ಅವರಿಗೆ ಪರಿಶಿಷ್ಟ ಜನಾಂಗದ ಸರ್ಟಿಫಿಕೇಟ್ ನೀಡಲು ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತಾ, ಇಂದು ಇಷ್ಟು ತಡವಾದರೂ ಸಹ ನನಗೆ ಈ ವಿಷಯದ ಬಗ್ಗೆ ಪ್ರಸ್ತಾಪಿಸಲು ಅನುಮತಿ ನೀಡಿದ ಸಭಾಧ್ಯಕ್ಷರಿಗೆ ಧನ್ಯವಾದ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ (ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವರು) : ಮಾನ್ಯ ಸದಸ್ಯರಾದ ಡಾ.ಸಾರ್ವ ಭೌಮ ಬಗಲಿಯವರು ಬಹಳ ಕಳಕಳಿಯ ಪ್ರಶ್ನೆಯನ್ನು ಕೇಳಿದ್ದು, ಅವರ ಕಳಕಳಿ ಸರಿಯಿದೆ. ಟೋಕರೆಕೋಳಿ, ಕೋಳಿಡೋರಾ, ಕೋಯಾ ಜಾತಿ ಈ ಎಲ್ಲಾ ಜಾತಿಗಳಿಗೆ ಸೇರಿಸಿ ಜಾತಿ ಪ್ರಮಾಣಪತ್ರ ಕೊಡುತ್ತಿಲ್ಲವೆಂದು ಹೇಳುತ್ತಾ, ಅದರ ಜೊತೆಗೆ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದೂ ಸಹ ಹೇಳುತ್ತಾರೆ. ಜಾತಿ ಪ್ರಮಾಣ ಪತ್ರದ ಸಮಸ್ಯೆಯಾದಾಗ ಬಿಜಾಪುರ ಜಿಲ್ಲಾಧಿಕಾರಿಗಳು 06.12.2012 ಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ಕೊಟ್ಟಿದ್ದಾರೆ. ಅವರು ಆ ಜಾತಿಗೆ ಸೇರಿದವರಾಗಿದ್ದಾರೆ ಸಂಪೂರ್ಣವಾದ ಮಾಹಿತಿಯನ್ನು ಮತ್ತು ಇದನ್ನು ಅಲ್ಲಿ ಅಧ್ಯಯನ ನಡೆಸಿ ಅದಕ್ಕೆ ಒಂದು ಸರ್ಟಿಫಿಕೇಟ್ ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಮಾಡಿದ್ದೇವೆ. ನಮ್ಮ ಸದಸ್ಯರು ಬಹಳ ಹಿರಿಯರು ಹಾಗೂ ಅನುಭವಸ್ಥರು. ಕೇವಲ ಸ್ಕೂಲ್ ಸರ್ಟಿಫಿಕೇಟ್ ಒಂದರ ಆಧಾರದ ಮೇಲೆ ಒಂದು ಜಾತಿ ಯನ್ನು ನಿರ್ಣಯಿಸಲಾಗುವುದಿಲ್ಲ. ಸ್ಕೂಲ್ ಸರ್ಟಿಫಿಕೇಟ್ ಕೂಡಾ ಒಂದು ಮಾನದಂಡವಾಗುತ್ತದೆಯೇ ಹೊರತು ಅದೊಂದೇ ಮಾನದಂಡವಲ್ಲ. ಇದರ ಜೊತೆಗೆ ಸ್ಥಳೀಯವಾಗಿ ಕೆಲವು ಸಮೀಕ್ಷೆಗಳನ್ನು ಮಾಡುತ್ತಾರೆ. ಅಲ್ಲಿ ಮಹಜರ್ ನಡೆಸಿದಾಗ ಅವರ ಸಂಬಂಧಿಕರ ಬಳಿ ಯಾವ್ಯಾವ ಸರ್ಟಿ

ಫಿಕೇಟ್‌ಗಳು ಇವೆ ಎಂಬುದನ್ನು ನೋಡಲಾಗುತ್ತದೆ. ಒಂದು ವೇಳೆ ಇವರ ಬಳಿ ಸರ್ಟಿಫಿಕೇಟ್ ಇಲ್ಲದಿದ್ದರೆ ಅದನ್ನೆಲ್ಲಾ ಮಾನದಂಡವಾಗಿ ಪರಿಗಣಿಸಿ ಜಾತಿ ಪ್ರಮಾಣ ಪತ್ರವನ್ನು ಕೊಡುತ್ತೇವೆ. ಇವತ್ತು ಅವರು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ತಹಶೀಲ್ದಾರ್‌ರವರು ಕೊಟ್ಟಿಲ್ಲವೆಂದರೆ ಎ.ಸಿ.ರವರಿಗೆ ಅಪೀಲ್ ಮಾಡಬಹುದು, ಎ.ಸಿ.ಕೊಡದಿದ್ದರೆ ಡಿ.ಸಿ.ರವರಿಗೆ ಅಪೀಲ್ ಮಾಡಬಹುದು. ಇದು ಯಾವುದೂ ಆಗದಿದ್ದರೆ ಸರ್ಕಾರಕ್ಕೆ. ಅಪೀಲ್ ಮಾಡುವಂತಹ ಸಂಪೂರ್ಣ ಶಕ್ತಿಯನ್ನು ನಮ್ಮ ಬಗಲಿಯವರು ಮತ್ತು ಬಿಜಾಪುರದ ಜನ ಹೊಂದಿದ್ದಾರೆ. ಹಂಪಿ ವಿಶ್ವವಿದ್ಯಾಲಯ ಪ್ರಕಾರ ಕೊಡಿ ಎಂದು ಹೇಳುತ್ತಿದ್ದಾರೆ. ಕುಲಶಾಸ್ತ್ರೀಯ ಅಧ್ಯಯನ ನಡೆಸಿ ಅದು ಬಂದ ನಂತರ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಕೇಂದ್ರ ಸರ್ಕಾರಕ್ಕೆ ವರದಿ ಕೊಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ಮಂತ್ರಿಗಳು ಬೆಂಗಳೂರಿಗೆ ಹೋಗಿದ್ದಾರೆ. ಅವರು ಇದನ್ನು ಪರಿಪೂರ್ಣವಾಗಿ ಅಧ್ಯಯನ ಮಾಡಿದವರಿದ್ದಾರೆ. ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಯಾವ ಮಾಹಿತಿ ಕೊಡಬೇಕು ಅದನ್ನು ಕೊಡುತ್ತೇವೆ. ಯಾವುದೇ ವಿದ್ಯಾರ್ಥಿಗಳಿಗೆ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಪ್ರಮಾಣಪತ್ರ ಕೊಡಿಸುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಮುರುಗೇಶ್ ಆರ್.ನಿರಾಣಿ (ಮಾನ್ಯ ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಅವರು ಹೇಳುತ್ತಿರುವುದು ನಿಜ. ಕೆಲವು ಬಿಟ್ಟು ಹೋಗಿರುವ ಉಪ ಜಾತಿಗಳನ್ನು ಸೇರಿಸಿ ಯಾರಿಗೂ ತೊಂದರೆಯಾಗದಂತೆ ಕ್ಯಾಬಿನೆಟ್ ಉಪ ಸಮಿತಿಯನ್ನು ಈಗಾಗಲೇ ಮಾಡಿದ್ದಾರೆ. ಸನ್ಮಾನ್ಯ ಸಿ.ಎಂ.ಉದಾಸಿ ರವರು ಅದಕ್ಕೆ ಅಧ್ಯಕ್ಷರಿದ್ದಾರೆ. ನೀರಾವರಿ ಸಚಿವರು, ಸಮಾಜ ಕಲ್ಯಾಣ ಸಚಿವರು ಹಾಗೂ ನಾನು ಅದರ ಸದಸ್ಯರಿದ್ದೇವೆ. ಈಗಾಗಲೇ ಮೂರು ಮೀಟಿಂಗ್‌ಗಳೂ ಆಗಿವೆ. ಹೀಗೆ ಬಿಟ್ಟು ಹೋಗಿರುವುದನ್ನು ಮುಂದಿನ ದಿನಮಾನಗಳಲ್ಲಿ ಯಾರಿಗೂ ತೊಂದರೆಯಾಗುದಂತೆ ಸರ್ಕಾರ ಅದರ ಕಡೆ ಲಕ್ಷ್ಯ ವಹಿಸುತ್ತದೆ.

ಶ್ರೀ ದೊಡ್ಡನಗೌಡ ಜಿ.ಪಾಟೀಲ್ (ಹುನಗುಂದ) : ಮಾನ್ಯ ಅಧ್ಯಕ್ಷರೆ, ಕೇವಲ ಬಿಜಾಪುರ ಜಿಲ್ಲೆಯಲ್ಲಿ ಅಷ್ಟೇ ಅಲ್ಲ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಟೋಕರೆ ಕೋಳಿ ಜನಾಂಗದವರಿದ್ದು, ಅವರಿಗೆ ತುಂಬಾ ಅನ್ಯಾಯವಾಗುತ್ತಿದೆ.

ಶ್ರೀ ಡಿ.ಎನ್. ಜೀವರಾಜ್ : ಇಡೀ ರಾಜ್ಯದಲ್ಲಿ ಈ ರೀತಿಯ ಸಮಸ್ಯೆ ಇದೆ, ಅವರು ಬಿಜಾಪುರ ಜಿಲ್ಲೆಯ ಬಗ್ಗೆ ಕೇಳಿರುವುದಕ್ಕೆ ನಾನು ಆ ಬಿಜಾಪುರದಲ್ಲಿ ಎನ್ನುವ ಪದವನ್ನು ಮಾತ್ರ ಉಪಯೋಗಿಸಿದೆ. ರಾಜ್ಯದಲ್ಲೇ ಈ ಸಮಸ್ಯೆ ಇದ್ದರೆ ಅದನ್ನು ಸಚಿವ ಸಂಪುಟದ ಉಪಸಮಿತಿಯಲ್ಲಿಟ್ಟು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ದೊಡ್ಡನಗೌಡ ಜಿ.ಪಾಟೀಲ್ : ಅವರು ಬೇರೆ ಬೇರೆ ಕಡೆಯಲ್ಲಿಯೂ ಇದ್ದಾರೆ. ಅವರಿಗೆ ಜಾತಿ ಪ್ರಮಾಣ ಪತ್ರ ಸಿಗುತ್ತಿಲ್ಲ. ನೀವು ಆಗಲೇ ಮಾತನಾಡುತ್ತಿರುವ ಸಂದರ್ಭದಲ್ಲಿ School Certificate ಮಾತ್ರ ಮಾನದಂಡವಲ್ಲವೆಂದು ಹೇಳಿದಿರಿ. ನೀವು ಅವರ ಗ್ರಾಮಗಳಿಗೆ ಅಥವಾ ಅವರಿರುವ ಓಣಿಗಳಿಗೆ ಹೋಗಿ ಪಂಚನಾಮೆ ಮಾಡಿಕೊಟ್ಟಿದ್ದೀರಲ್ಲಾ?

ಅಧ್ಯಕ್ಷರು : ಇದಕ್ಕಾಗಿ ಕ್ಯಾಬಿನೆಟ್ ಉಪ ಸಮಿತಿ ಮಾಡಿದ್ದಾರೆಂದು ಹೇಳುತ್ತಿದ್ದಾರಲ್ಲಾ?

ಶ್ರೀ ಡಿ.ಎನ್. ಜೀವರಾಜ್ : ಅವರು ಪಂಚನಾಮೆ ಎಂದರು. ಆದರೆ ನಾನು ಅದೇ ಪದವನ್ನು ಮಹಜರ್ ಎಂದು ಹೇಳಿದೆ. ಆದರೆ ಇದರಲ್ಲಿ ಭಾಷೆಯ ವ್ಯತ್ಯಾಸವಿದೆ. ಎರಡೂ ಒಂದೇ ಪದವಾಗಿರುವುದರಿಂದ ನಿಮ್ಮೂರಿನಲ್ಲಿ ಅದನ್ನೇ ಮಾಡಿಸುತ್ತೇವೆ ಮತ್ತು ಅದರ ಮುಖಾಂತರ ಕೊಡುತ್ತೇವೆ. ಇದರಲ್ಲಿ ಕ್ಯಾಬಿನೆಟ್‌ಸಬ್ ಕಮಿಟಿಯಾಗಿರುವುದರಿಂದ ಅವರು ಏನು ಕೇಳುತ್ತಿದ್ದಾರೆ, ಕೇಂದ್ರ ಸರ್ಕಾರಕ್ಕೆ ಮಾಹಿತಿ ಕೊಡಬೇಕೆಂದು ಎನ್ನುವಂಥದ್ದನ್ನು, ಈಗಾಗಲೇ ಈ ಸಮಿತಿಯಲ್ಲಿ ಯಾರ್ಯಾರು ಸದಸ್ಯರಾಗಿದ್ದಾರೆಂಬುದನ್ನು ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ಹೇಳಿದ್ದಾರೆ. ಉಪ ಸಮಿತಿಯ ವರದಿ ಬಂದ ನಂತರ ನೀವು ಹೇಳಿರುವ ಎಲ್ಲಾ

ಪ್ರಶ್ನೆಗಳಿಗೆ ಸೂಕ್ತವಾದಂತಹ ಉತ್ತರಗಳನ್ನು ನೀಡಿ, ಅನುಕೂಲವನ್ನು ಮಾಡಿ ಕೊಡುತ್ತೇವೆ.

ಶ್ರೀ ದೊಡ್ಡನಗೌಡ ಜಿ.ಪಾಟೀಲ್ : ಧನ್ಯವಾದಗಳು.

ಶ್ರೀ ಕೆ.ಜಿ. ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಸಚಿವರು ಹೇಳಿದ ಹಾಗೆ ಕೇವಲ ಶಾಲಾ ದಾಖಲಾತಿ ಪ್ರಮಾಣ ಪತ್ರ ಒಂದೇ ಮಾನದಂಡವಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ, ನಮ್ಮ ಬೋಮಿ ಜನಾಂಗಕ್ಕೆ ಸೇರಿದಂತೆ ಟೋಕರೆಕೋಳಿ ಜಾತಿಯಲ್ಲಿ ಸಮಸ್ಯೆಯಿರುವಂತೆ ನಮ್ಮ ಜಾತಿಯಲ್ಲಿಯೂ ಇದೆ. ಬೋವಿ ಹಾಗೂ ಒಡ್ಡ, ಒಡ್ಡೆ, ಓಡ್ ಈ ಜಾತಿಗಳಿಗೂ ಸಹ ಸರ್ಟಿಫಿಕೇಟ್‌ಗಳನ್ನು ಕೊಡಬೇಕೆಂದು ಹೇಳಿ ಸರ್ಕಾರಿ ಆದೇಶವಿದೆ. ಆದರೆ, ಸರ್ಕಾರಿ ಅಧಿಕಾರಿಗಳು ನೀವು ಬೋವಿ, ವಡ್ಡ ಜನಾಂಗಕ್ಕೆ ಸೇರಿದ್ದೀರಾ ಅಥವಾ ಇಲ್ಲವೇ ಎಂದು ಬೇರೆ ಬೇರೆ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ. ಅದಾದ ನಂತರ ನೀನು ಕನ್ನಡ ಮಾತನಾಡುತ್ತೀಯಾ, ತೆಲುಗು ಭಾಷೆ ಮಾತನಾಡುತ್ತೀಯಾ ತಮಿಳು ಭಾಷೆ ಮಾತಾಡುತ್ತೀಯಾ ಎಂದು ಕೇಳುತ್ತಾರೆ. ಮಾನ್ಯ ಸಚಿವರಾದ ಜೀವರಾಜ್ ಅವರಿಗೆ ನಮ್ಮ ಸಮಾಜದ ಬಗ್ಗೆ ಚೆನ್ನಾಗಿ ಗೊತ್ತಿದೆ. ಈ ರೀತಿ ಬಹಳಷ್ಟು ಸಮಸ್ಯೆಗಳನ್ನು ತಂದು ಕೊಡುತ್ತಾರೆ. 1828ರ ಶೃಂಗೇರಿ ಶಾಸನ, 1911 ರಲ್ಲಿ ಹೊನ್ನಾಳಿಯ ಹತ್ತಿರವಿರುವ ಒಂದು ಊರಿನಲ್ಲಿ ಶಾಸನಗಳನ್ನು ತಂದು ಕೊಟ್ಟರೂ ಸಹ ನಮ್ಮ ಅಧಿಕಾರಿಗಳು ಒಪ್ಪುವುದಿಲ್ಲ. ಮಾನ್ಯ ಜಿಲ್ಲಾಧಿಕಾರಿಗಳು ನೀವು ಆ ಜನಾಂಗಕ್ಕೆ ಸೇರುವುದಿಲ್ಲ, ಈ ಜನಾಂಗಕ್ಕೆ ಸೇರುವುದಿಲ್ಲವೆಂದು ಹೇಳುತ್ತಾರೆ. ಆದರೆ ಬೋವಿ. ಒಡ್ಡ, ಒಡ್ಡೆ ಹಾಗೂ ಓಡ್ ಅವರಿಗೂ ಕೊಡಲಿ, ಬೋವಿ ಜನಾಂಗಕ್ಕೂ ಪ್ರಮಾಣ ಪತ್ರವನ್ನು ಕೊಡಲಿ. ಆದರೆ ಸಂವಿಧಾನದ ಪ್ರಕಾರ 23ನೇ ಕ್ರಮ ಸಂಖ್ಯೆಯಲ್ಲಿ ಬೋವಿ ಜನಾಂಗಕ್ಕೆ ಜಾತಿ ಪ್ರಮಾಣ ಪತ್ರವನ್ನು ಕೊಡಬೇಕೆಂದು ಇದೆ. ಇದರ ಜೊತೆಗೆ 2002 ರಲ್ಲಿ ಒಡ್ಡ, ಒಡ್ಡೆ, ಓಡ್ ಜನಾಂಗಳಗಳಿಗೂ ಪ್ರಮಾಣ ಪತ್ರವನ್ನು ಕೊಡಬೇಕೆಂದು ಆದೇಶವಾಗಿದೆ. ಈ ಸರ್ಕಾರಿ ಆದೇಶದ ಪ್ರಕಾರ ಆ ಜನಾಂಗಕ್ಕೂ ಹಾಗೂ ಈ ಜನಾಂಗಕ್ಕೂ ಸರ್ಟಿಫಿಕೇಟ್ ಕೊಡಬೇಕು. ಈ ರೀತಿಯ ತಾರತಮ್ಯ

ಗಳನ್ನು ಮಾಡುತ್ತಾರೆ. ಅದೇ ರೀತಿಯಲ್ಲಿ ನಮ್ಮಲ್ಲಿರುವ ಟೋಕರೆಕೋಳಿ ಜನಾಂಗದವರಿಗೂ ಕೂಡ ತಾರತಮ್ಯವನ್ನು ಮಾಡಿ ಸರ್ಟಿಫಿಕೇಟ್ ಕೊಡುತ್ತಿಲ್ಲ. ದಯಮಾಡಿ ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ, ಇನ್ನೊಂದು ಸುತ್ತೋಲೆಯನ್ನು ಹೊರಡಿಸಿ, ಎಲ್ಲಾ ಜನಾಂಗದವರಿಗೂ ಸರ್ಟಿಫಿಕೇಟ್ ಕೊಡಬೇಕೆಂದು ಹೇಳಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಡಾ. ಸಾರ್ವಭೌಮ ಸಾತಗೌಡ ಬಗಲಿ (ಇಂಡಿ) : 1994 ರ ಸರ್ಕಾರಿ ಆದೇಶದಲ್ಲಿ ಏನು ಹೇಳಿದ್ದಾರೆಂದರೆ ಶಾಲಾ ಸರ್ಟಿಫಿಕೇಟ್‌ನಲ್ಲಿ ಇರುವಂತ ಹವರ ಜಾತಿ, ಅದೇ ಜಾತಿಗೆ ಸೇರಿರುವರೆಂಬುದಕ್ಕೆ ಪ್ರಬಲ ಸಾಕ್ಷಿಯೆಂದು ಪರಿಗಣಿಸಿ. They have used specific words. School certificate ನಲ್ಲಿ ಅವರ ಜಾತಿ ಟೋಕರೆಕೋಳಿ ಎಂದು ನಮೂದಾಗಿದ್ದರೆ it is a very strong evidence. It should be accepted as it is. ಈ ರೀತಿಯ ಸರ್ಕಾರಿ ಆದೇಶವಿದ್ದರೂ ಸಹ ಮಾನ್ಯ ಜಿಲ್ಲಾಧಿಕಾರಿಗಳು ಜನಗಳಿಗೆ ಏಕೆ ಈ benefit ಕೊಡುತ್ತಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಶಾಲಾ ದಾಖಲಾತಿಯನ್ನೂ ಸಹ ಒಂದು ಮಾನದಂಡವಾಗಿ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ಲೋಕಲ್‌ನಲ್ಲಿ ಮಹಜರ್ ಮಾಡಬೇಕು ಹಾಗೂ ಸುತ್ತಮುತ್ತಲಿರುವ ಸಂಬಂಧಿಕರನ್ನು ನೋಡಿ ಮಾಡುತ್ತೇವೆಂದು ಹೇಳಿದ್ದೇವೆ. ಸರ್ಕಾರ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಚರ್ಚೆ ಬೇಡ ಸಾಕು.

10. ಪ್ರಕಟಣೆ :

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118 ರ–ಮೇರೆಗೆ ವಿಧಾನ ಪರಿಷತ್ತು 2012ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ–4 ವಿಧೇಯಕವನ್ನು